http://www.howtoexam.com

**DK 02**

## ಪಿ.ಯು.ಸಿ. ನಂತರದ ಕನ್ನಡ ಡಿಪ್ಲೊಮಾ ಪರೀಕ್ಷೆ, ಆಗಸ್ಟ್ 2009
## ಪತ್ರಿಕೆ – 2 : ನಡುಗನ್ನಡ ಮತ್ತು ಹೊಸಗನ್ನಡ ಪಠ್ಯಗಳು
## (ಹರಿಶ್ಚಂದ್ರ ಕಾವ್ಯ ಸಂಗ್ರಹ, ಕುವೆಂಪು ಆಯ್ದ ಕವನಗಳು ಮತ್ತು ಗೆಲಿಲಿಯೋ)
## (ಹೊಸ ಪಠ್ಯಕ್ರಮ)

ಕಾಲ : 3 ಗಂಟೆಗಳು ಗರಿಷ್ಠಾಂಕ : 100

### ವಿಭಾಗ – ಎ

1. ಯಾವ ಪಠ್ಯವನ್ನೂ ಬಿಡದೆ **ಎರಡರ** ಭಾವಾರ್ಥವನ್ನು ಸಂದರ್ಭಸಹಿತ ವಿವರಿಸಿ : **(5×2=10)**

1.1) ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ ಸಪ್ತ
ಶರಧಿ ಪರಿವೃತ ಧರೆಯ ಸಿರಿಯ ಸೊಬಗಜ್ಞಾತವಾಸಕ್ಕೆ ಪೋಗುತಿದೆಕೋ
ಎರೆವ ದೀನಾನಾಥರಾನಂದವಡಗುತಿದೆ
ವರಮುನೀಂದ್ರರ ಯಾಗರಕ್ಷೆ ಬಲವಳಿಯುತಿದೆ
ನಿರುತವೆಂದೊಂದಾಗಿ ಬಂದು ಸಂದಿಸಿ ನಿಂದ ಮಂದಿನೆಱೆಮೊಱೆಯಿಟ್ಟುದು

1.2) ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲಮಾ
ತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ ರೂಪ ನೆರೆ
ನೋಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್ಮುಡಿಗಳಿಂ ಸುಳಿವ ತಂಗಾಳಿಯಿಂ
ತೀಡುವ ಸುಗಂಧಮಂ ಮೂಸಿಸಿದ ನಾಸಿಕಕೆ
ನಾಡೆ ಹೊಲೆಯಿಲ್ಲ ಸೋಂಕಿಗೆ ಹೊಲೆಯುಂಟಾಯ್ತೆ
ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಮವೊಂದಿಧಿಕವೇ

1.3) ಉದಯದೊಳೇನ್ ? ಹೃದಯವ ಕಾಣ್ !
ಅದೆ ಅಮೃತದ ಹಣ್ಣೊ !
ಶಿವ ಕಾಣದೆ ಕವಿ ಕುರುಡನೊ ;
ಶಿವ ಕಾವ್ಯದ ಕಣ್ಣೊ !

P.T.O.

Placement paper, University exam paper, entrance exam and school question paper

http://www.howtoexam.com



1.4) ಅಲ್ಲಿ ಇಂತಿರಬೇಕು, ಇಂತಿರಬಾರದೆಂಬುದಿಲ್ಲವೈ ;
ಅಲ್ಲಿ ಹೊರೆ ಹೊಣೆಯಿಲ್ಲ; ಶಾಸ್ತ್ರದ ವಿಧಿ ನಿಷೇಧಗಳಿಲ್ಲವೈ ;
ಜಾತಿಗೀತಿಯ ವೇದಭೇದದ ಕಟ್ಟುಕಟ್ಟಳೆ ನಿಲ್ಲದೈ ;
ಅಲ್ಲಿ ಪ್ರೀತಿಯೆ ನೀತಿ ; ಧರ್ಮಕೆ ಬೇರೆ ಭೀತಿಯೆ ಸಲ್ಲದೈ !

2. **ಎಂಟು** ಪದಗಳಿಗೆ ಅರ್ಥ ಬರೆಯಿರಿ : **(½×8=4)**

2.1) ಹರಣ, ಮೃಡ, ಒಡಲು, ಪುರ, ಕಿಂಕರ, ಅಗ್ಗ, ತಿಮಿರ, ಸಿಂಧು, ತಿರೆ, ವಿಪಿನ, ವ್ಯೋಮ, ಮದನ.

2.2) **ಮೂರನ್ನು** ಕುರಿತು ಟಿಪ್ಪಣಿ ಬರೆಯಿರಿ : **(2×3=6)**

ವಾರ್ಧಕ ಷಟ್ಪದಿ, ವಸಿಷ್ಠ, ಕೂಸಿನ ಕನಸು, ಗುರು ಕೃಪೆ.

3. **ಐದಕ್ಕೆ** ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ : **(2×5=10)**

3.1) ಎನ್ನಾಶ್ರಮಕ್ಕೊಯ್ದು ಬಳಿಕ ನೋಡುವೆನವನ ಸತ್ಯಗಿತ್ಯದ ಬಲುಹ.

3.2) ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ.

3.3) ಅಕ್ಕಕ್ಕು ಬಚ್ಚಲುದಕಂ ತಿಳಿದಡಾರ ಮೀಹಕ್ಕೆ ಯೋಗ್ಯಂ.

3.4) ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತು.

3.5) ಇನ್ನೇಕೆ ನುಡಿದೆನ್ನ ನಾಚಿಸುವೆ ಭೂಪಾಲ.

3.6) ತೃಣಮಪಿ ನ ಚಲತಿ ತೇನ ವಿನಾಃ.

3.7) ಕಂದನಲಿ ಶಿವನ ಕಾಣುವ ಬಂಧನವೆ ಮುಕ್ತಿ.

3.8) ಸತ್ತ ಕಲ್ಗಳ ಮುಂದೆ ಅತ್ತು ಕರೆದುದು ಸಾಕು.

3.9) ನೀನು ಮನುಜನ ಮಹಾಮತಿಗೆ ವಿಜಯ ಪತಾಕೆ.

3.10) ನಮ್ಮ ಹೃದಯವೆ ನಮಗೆ ಶ್ರೀ ಧರ್ಮಸೂತ್ರ.

Placement paper, University exam paper, entrance exam and school question paper

http://www.howtoexam.com



## ವಿಭಾಗ – ಬಿ

4. ಅ) ಹರಿಶ್ಚಂದ್ರ ಕಾವ್ಯದಲ್ಲಿ ಚಿತ್ರಣಗೊಂಡ ರಾಜ್ಯ ಸಮರ್ಪಣ ಸನ್ನಿವೇಶದ ಕುರಿತು ಬರೆಯಿರಿ. **10**

**ಅಥವಾ**

ಚಂದ್ರಮತಿ ಪಾತ್ರದ ವಿಶೇಷತೆಯನ್ನು ವಿವರಿಸಿ.

ಆ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(5×2=10)**

1) ವೀರಬಾಹು.

2) ವಿಶ್ವಾಮಿತ್ರನ ಪಾತ್ರ ಚಿತ್ರಣ.

3) ಗಾನ ರಾಣಿಯರು.

5. ಅ) ಕುವೆಂಪು ಅವರ 'ಆಯ್ದ ಕವನ'ಗಳಲ್ಲಿ ವ್ಯಕ್ತವಾಗುವ ವೈಚಾರಿಕ ಭಾವವನ್ನು ನಿರೂಪಿಸಿ. **10**

**ಅಥವಾ**

ಜೇನಾಗುವಾ, ಮಧುಮಂಚಕೆ ಬಾ ಮದುಮಗಳೆ ಎಂಬ ಎರಡು ಕವನಗಳನ್ನು ವಿವರಿಸಿ.

ಆ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(5×2=10)**

1) ಅನಿಕೇತನ ಕವನದ ಆಶಯ.

2) 'ಬಾ ಫಾಲ್ಗುಣ ರವಿ ದರ್ಶನಕೆ' ಕವನ ಸ್ವಾರಸ್ಯ.

3) ಪಕ್ಷಿ ಕವನದ ಆಶಯ.

4) ಎಂತು ನೂಕಲಿ ನಾಳೆಯೊಂದು ದಿನವನು ಚೆನ್ನಾ ಕವನದ ಸ್ವಾರಸ್ಯ.

## ವಿಭಾಗ – ಸಿ

6. ಅ) ಗೆಲಿಲಿಯೋ ನಾಟಕದ ವಸ್ತು, ಶೈಲಿ ಮತ್ತು ಆಶಯದ ಕುರಿತು ಬರೆಯಿರಿ. **10**

**ಅಥವಾ**

ಗೆಲಿಲಿಯೋ ಸ್ಯಾಗ್ರಡೋ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ನಿರೂಪಿಸಿ.

Placement paper, University exam paper, entrance exam and school question paper

http://www.howtoexam.com



ಆ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **10**

1) ಗೆಲಿಲಿಯೋ.

2) ಚಿಕ್ಕಪಾದ್ರಿ.

3) ಪ್ಯಾಕ್ಯುರೇಟರ್.

4) ನಾಟಕದ ಭಾಷೆ.

7. **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(5×2=10)**

1) ಚರ್ಚು ಮತ್ತು ವಿಜ್ಞಾನ.

2) ಇನ್‌ಕ್ವಿಜಿಟರ್.

3) ಆಂದ್ರಿಯ.

4) ವ್ಯವಸ್ಥೆ ಮತ್ತು ಸಾಮಾಜಿಕ ಬದಲಾವಣೆ.

HowToExam.com

Placement paper, University exam paper, entrance exam and school question paper